(ರಿ. ನಂ. ARM-1881/0-70
☎ : 0821-2443424 📱 9483482444
**ಬಿ.ಎಸ್.ಎನ್.ಎಲ್. ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನಿ)**
Email : bsnlehbcs@gmail.com www.mysurebsnlehcs.co.in www.mysurebsnlehcs.com

ಕ್ರಮ ಸಂಖ್ಯೆ : BSNLEHCS/5th(II)(III) 2025-26 ದಿನಾಂಕ 21/08/2025.

ಮಾನ್ಯರೆ,

**ವಿಷಯ :- 5ನೇ ಹಂತದ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ಮತ್ತು ಮೂಲೆ ನಿವೇಶನಗಳ ಹರಾಜಿನ ಬಗ್ಗೆ ಸೂಚನೆ**

**********************************************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಈ ಮೂಲಕ ತಮಗೆ ತಿಳಿಯಪಡಿಸುವುದೇನೆಂದರೆ. ಸಂಘವು ಮೈಸೂರು ತಾಲ್ಲೂಕು, ವರುಣ ಹೋಬಳಿ, ವಾಜಮಂಗಲ ಗ್ರಾ ಮದ, **ಸರ್ವೆ ನಂಬರ್:- 139/1,141/3,142/3,194/3 ಒಟ್ಟು 06 ಎಕರೆ 04 ಗುಂಟೆ (ಫೇಸ್-2) ಮತ್ತು 1434/2,215/2ರ ಒಟ್ಟು 03 ಎಕರೆ 09 ಗುಂಟೆ (ಫೇಸ್-3)** ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯಲ್ಲಿ ಹಂಚಿಕೆಗೆ ಇರುವ ನಿವೇಶನಗಳನ್ನು ದಿನಾಂಕ:- 30/08/2025 ರ ಶನಿವಾರ ಬೆಳಗ್ಗೆ 11.30 ಗಂಟೆಗೆ **"ಶ್ರೀ ನಟರಾಜ ಪ್ರಾರ್ಥನಾ ಮಂದಿರ" (ಸಭಾ ಭವನ),ಫೋರ್ಟ್ ಮೊಹಲ್ಲಾ ಮೈಸೂರು-570 004** ಇಲ್ಲಿ ಏರ್ಪಡಿಸಲಾಗಿದೆ.

ಬೆಳಗ್ಗೆ 11.30 ಗಂಟೆಗೆ ಮೂಲೆ ನಿವೇಶನಗಳ ಹರಾಜು ಪ್ರಾರಂಭವಾಗುತ್ತದೆ. ಬಡಾವಣೆಯಲ್ಲಿ ಹಲವಾರು ಮೂಲೆ ನಿವೇಶನಗಳು ಸಹ ಹಂಚಿಕೆಗೆ ಲಭ್ಯವಿದ್ದು , ನಿವೇಶನಗಳ ಅಳತೆಗೆ ಅನುಗುಣವಾಗಿ ಶೇಕಡ 20% ರಷ್ಟು ಹೆಚ್ಚುವರಿಯಾಗಿ ಪಾವತಿಸಲು ಮತ್ತು ನಿವೇಶನಕ್ಕೆ ಬಿಡ್ ಮಾಡಲಾಗುವ ಮೊತ್ತವನ್ನು ಪಾವತಿಸಲು ಸಮ್ಮತಿ ಇದ್ದಲ್ಲಿ, ಸದರಿ ಹರಾಜಿನಲ್ಲಿ ಭಾಗವಹಿಸಲು ಇಚ್ಚೆಯುಳ್ಳ ಸದ್ಯಸರು ಕೆಳಕಂಡಂತೆ ಇ.ಎಂ.ಡಿ. (ನಗದು/ಡಿ.ಡಿ/ ಆನ್ಲೈನ್ ಮುಖಾಂತರ) ಮೊಬಲಗನ್ನು ಪಾವತಿಸಿ ಮೂಲೆ ನಿವೇಶನಗಳ ಹರಾಜಿನಲ್ಲಿ ಭಾಗವಹಿಸಲು ಅರ್ಹತೆ ಪಡೆಯಬಹುದಾಗಿರುತ್ತದೆ. ದಿನಾಂಕ:-30/08/2025 ರಂದು ಬೆಳಗ್ಗೆ 9 ರಿಂದ 10 ಗಂಟೆಯ ಒಳಗೆ ನಗದಿನರೂಪದಲ್ಲಿ ಪಾವತಿಸಬಹುದು, ಆನ್ಲೈನ್ ಮುಖಾಂತರ ಪಾವತಿಸುವ ಸದಸ್ಯರು ಸಂಘದ ವಾಟ್ಸಪ್ ನಂಬರ್‌ಗೆ ಹಣ ಪಾವತಿಸಿದ ವಿವರ ಕಳುಹಿಸತಕ್ಕದ್ದು.

**ಶ್ರೇಣಿ** **ಇ.ಎಂ.ಡಿ. ಮೊಬಲಗು.**

| | | | |
|---|---|---|---|
| **6 x 9** | **9 X 12** | **9 X 15** | **ರೂ/ - 10,000.** |

ದಿನಾಂಕ:30/08/2025 ರ ಬೆಳಗ್ಗೆ 11.00 ರಿಂದ 30x50, 30x40 ,20x30 ಅಳತೆಯ ಮೂಲೆ ನಿವೇಶನಗಳ ಹರಾಜು ನೆಡೆಯಲಿದೆ ನಂತರ ಬಾಕಿಯಿರುವ ನಿಯಮಿತ/ಸಾಮಾನ್ಯ ಅಳತೆಯ30x50, 30x40 ,20x30 ನಿವೇಶನಗಳನ್ನು ಉಳದ ಸದಸ್ಯರಿಗೆ ಮತ್ತು ಮೂಲೆ ನಿವೇಶನ ಹರಾಜಿನಲ್ಲಿ ಮೂಲೆ ನಿವೇಶನ ಪಡೆಯದೆ ಉಳಿದ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಯನ್ನು ಸಂಘದ ವೆಬ್ ಸೈಟ್‌ನಲ್ಲಿ (www.mysurubsnlehcs.co.in.) ಪಡೆಯಬಹುದಾಗಿರುತ್ತದೆ.

**ವಿಶೇಷ ಸೂಚನೆ:-**

1) ಹರಾಜಿನಲ್ಲಿ ಭಾಗವಹಿಸುವ ಸದಸ್ಯರ ಜೇಷ್ಠತಾ ಪಟ್ಟಿ ವಿವರ ಮತ್ತು ನಿವೇಶನಗಳ ಅಳತೆಯ ವಿವರಗಳನ್ನು ಹಾಗು **ಎಲ್ಲಾ** ಮಾಹಿತಿ, ನಿಬಂಧನೆಗಳು ಮುಂತಾದವುಗಳನ್ನು ಸಂಘದ ವೆಬ್‌ಸೈಟ್‌ನಲ್ಲಿ (www.mysurubsnlehcs.co.in.) ಪರಿಶೀಲಿಸಬಹುದು.

2). ಹರಾಜಿಗು ಮುನ್ನ ಸದ್ಯಸರು ಬಡಾವಣೆಗೆ ಭೇಟಿ ನೀಡಿ ನಿವೇಶನಗಳನ್ನು ಖುದ್ದಾಗಿ ಪರಿಶೀಲಿಸಿ . . ಹರಾಜಿನಲ್ಲಿ ಭಾಗವಹಿಸಲು ಸೂಚಿಸಲಾಗಿದೆ.

3). ನಿವೇಶನ ಹಂಚಿಕ್ಕೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಸದಸ್ಯರು ತಾವು ಕಳುಹಿಸುವ ವ್ಯಕ್ತಿಯ ಜೋತೆಗೆ ಅಧಿಕಾರ ಪ್ರ ಮಾಣ ಪತ್ರ ವನ್ನು ಕಳುಹಿಸತ್ಕದ್ದು.

4) ಸದಸ್ಯರುಗಳು ಕಡ್ಡಾಯವಾಗಿ ಸಂಘಕ್ಕೆ ಆಫಿಡವಿಟ್‌ಅನ್ನು ಸಲ್ಲಿಸಿದ ನಂತರವೇ ಹರಾಜಿನಲ್ಲಿ ಭಾಗವಹಿಸಬೇಕು.

- **ಮೂಲೆ ನಿವೇಶನ ಹರಾಜಿನ ಬಗ್ಗೆ ನಿಬಂಧನೆಗಳು.**

**1.** ಮೂಲೆ ನಿವೇಶನ ಹರಾಜಿನಲ್ಲಿ ಭಾಗವಹಿಸುವ ಸದಸ್ಯರುಗಳು ನಿವೇಶನಕ್ಕೆ ನಿಗದಿಪಡಿಸಿರುವ ದರ ಚದುರ ಮೀಟರ್ 1ದಕ್ಕೆ 9845.4 ದರಕ್ಕೆ ಹೆಚ್ಚುವರಿಯಾಗಿ ಚ,ಮೀ 1ಕ್ಕೆ 20% ದರಕ್ಕಿಂತ ಕಡಿಮೆದರಕ್ಕೆ ಬಿಡ್ ಮಾಡಲು ಅವಕಾಶವಿರುವುದಿಲ್ಲ.

**2.** ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ತಾವು ಅರ್ಜಿಸಲ್ಲಿಸಿರುವ ಶ್ರೇಣಿಗೆ ಅನುಗುಣವಾಗಿ ಇ.ಎಂ.ಡಿ ಮೊಬಲಗನ್ನು ಪಾವತಿಸಿರಬೇಕು.

**3.** ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ತಾವು ಅರ್ಜಿಸಲ್ಲಿಸಿರುವ ನಿವೇಶನದ ಅಳತೆಗನುಗುಣವಾಗಿ **ಪೂರ್ಣ** ಮೊಬಲಗನ್ನು ಸಂಘಕ್ಕೆ ಪಾವತಿಸಿರಬೇಕು.

**4.** ಯಶಸ್ವಿಬಿಡ್‌ದಾರರು ಬಿಡ್‌ನ ಪೂರ್ಣ ಮೊಬಲಗನ್ನು ಹರಾಜಿನ ದಿನಾಂಕದಿಂದ :30 ದಿವಸಗಳ ಒಳಗಾಗಿ ಸಂಘಕ್ಕೆ ಪಾವತಿಸಲು ಭದ್ಧರಿರತಕದ್ದು .ತಪ್ಪಿದಲ್ಲಿ ನಿವೇಶನ ಮಂಜೂರಾತಿಯನ್ನು ಪಡೆಯಲು ಅವಕಾಶವಿರುವುದಿಲ್ಲ ಹಾಗು ಪಾವತಿಸಿರುವ ಇ.ಎಂ.ಡಿ ಮೊಬಲಗನ್ನು ಸಂಘವು ಮುಟ್ಟುಗೋಲು ಹಾಕಿಕೂಳ್ಳಲಾಗುವುದು. ಹರಾಜಿನಲ್ಲಿ ಯಶಸ್ವಿಯಾಗದ ಬಿಡ್‌ದಾರರಿಗೆ ಇ.ಎಂ.ಡಿ ಮೊಬಲಗನ್ನು ಮರುಪಾವತಿಸಲಾಗುವುದು.

**5.** ಹರಾಜಿನಲ್ಲಿ ಯಶಸ್ವಿಯಾದ ಬಿಡ್‌ದಾರರು ಸಂಘವು ವಿವಿಧ ಅಳತೆ ನಿವೇಶನಗಳಿಗೆ ನಿಗದಿಪಡಿಸಿರುವ ಬೆಲೆ ಅಲ್ಲದೆ ನಿವೇಶನದ ವಿಸ್ತೀರ್ಣದಲ್ಲಿ ಹೆಚ್ಚಳವಿದ್ದಲ್ಲಿ ವಿಸ್ತೀರ್ಣಕ್ಕೆ ಅನುಗುಣವಾಗಿ ತಗಲುವ ಮೊಬಲಗನ್ನು ಪಾವತಿಸಬೇಕು ವಿಸ್ತೀರ್ಣ ಕಡಿಮೆ ಇದ್ದಲ್ಲಿ ಅದಕ್ಕೆ ಅನುಗುಣವಾಗಿ ಬೆಲೆಯಲ್ಲಿ ಮಾಡಲಾಗುವುದು.

**6.** ಹರಾಜನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಸಂಘದ ಆಡಳಿತಮಂಡಳಿಯು ಕಾಯ್ದಿರಿಸಿಕೊಂಡಿದೆ.

**7.** ಸಂಘವು ಮೂಲೆ ನಿವೇಶನಗಳು ಮೈಸೂರು ನಗರಾಭಿವೃದ್ಧಿ **ಪ್ರಾಧಿಕಾರದಿಂದ** ಬಿಡುಗಡೆಗೊಂಡನಂತರವಷ್ಟೆ ಯಶಸ್ವಿಬಿಡ್‌ದಾರರು ನಿವೇಶನವನ್ನು ನೋಂದಾಯಿಸಿಕೊಳ್ಳಲು ಭದ್ಧರಿರತಕದ್ದು

**8.** ಸದಸ್ಯರುಗಳು ಕಡ್ಡಾಯವಾಗಿ ಸಂಘಕ್ಕೆ ಆಫಿಡವಿಟ್‌ಅನ್ನು ಸಲ್ಲಿಸಿದ ನಂತರವೇ ಹರಾಜಿನಲ್ಲಿ ಭಾಗವಹಿಸಬೇಕು.

**ವಂದನೆಗಳೊಂದಿಗೆ,**

ಆಡಳಿತ ಮಂಡಳಿ ಅನುಮತಿ ಮೇರೆಗೆ

Anjali AD

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಬಿ.ಎಸ್.ಎನ್.ಎಲ್ ನೌಕರರ ಹೌಸಿಂಗ್ ಸಹಕಾರ
ಸಂಘ (ನಿ). ಮೈಸೂರು
B.S.N.L. Employees Housing
Co-operative Society Ltd

(ರಿ.ನಂ. ARM-1881/70-71) ಮೊ.ನಂ:0821–2443424/94834 82444
www.mysurubsnlehcs.co.in bsnlehbcs@gmail.com

# ಬಿ.ಎಸ್.ಎನ್.ಎಲ್. ನೌಕರರ ಹೌಸಿಂಗ್ ಸಹಕಾರ ಸಂಘ (ನಿ)

#ನಂ./140/9 ಹೊಸ ನಂ.ಎಫ್–3/9,2ನೇ ಕ್ರಾಸ್,ಶಂಕರಮಠದ ರಸ್ತೆ,ಫೋರ್ಟ್ ಮೊಹಲ್ಲಾ,
ಮೈಸೂರು–570004

---

ದಿನಾಂಕ: 18/08/2025

ಮಾನ್ಯರೆ,

ವಿಷಯ:–5 ನೇ ಹಂತದ ನಿವೇಶನದಾರರ ನಿವೇಶ ಹಂಚಿಕೆ ಬಗ್ಗೆ ಸೂಚನಾ ಪತ್ರ.

..........................................................................

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮಗೆ ಈ ಪತ್ರದ ಮೂಲಕ ತಿಳಿಯು ಪಡಿಸುವುದೇನೆಂದರೆ ಸಂಘವು ಮೈಸೂರು ತಾಲ್ಲೂಕು, ವರುಣ ಹೋಬಳಿ, ವಾಜಮಂಗಲ ಗ್ರಾಮದ ವಿವಿಧ ಸರ್ವೆ ನಂಬರ್‌ಗಳ ಜಮೀನಿನಲ್ಲಿ ಅಭಿವೃದ್ಧಿಪಡಿಸಿರುವ , ವಸತಿ ಬಡಾವಣೆಯ ನಿವೇಶನಗಳನ್ನು ಸದಸ್ಯರಿಗೆ ಹಂಚಿಕೆ ಮಾಡಲು ಸಂಘವು ತಯಾರಿದ್ದು, ಸಂಘವು ದಿನಾಂಕ"30/08/2025 ರ ಶನಿವಾರ ರಂದು ಬೆಳಿಗ್ಗೆ 11 ಗಂಟೆಗೆ "ಶ್ರೀ ನಟರಾಜ ಪ್ರಾರ್ಥನಾ ಮಂದಿರ" (ಸಭಾ ಭವನ),ಫೋರ್ಟ್ ಮೊಹಲ್ಲಾ ಮೈಸೂರು–570 004 ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಎನ್.ಡಿ.ಸುಂದರ್ ರವರ ಅಧ್ಯಕ್ಷತೆಯಲ್ಲಿ ನಿವೇಶನ ಹಂಚಿಕೆಯ ಸಮಾರಂಭವನ್ನು ಏರ್ಪಡಿಸಿದ್ದು ತಾವು ಸಮಾರಂಭಕ್ಕೆ ಆಗಮಿಸಿ ತಮ್ಮಗೆ ಇಚ್ಛೆಯುಳ್ಳ ನಿವೇಶನವನ್ನು ತಮ್ಮ ಜೇಷ್ಠತೆಯ ಆಧಾರದ ಮೇಲೆ ಆಯ್ದುಕೊಳ್ಳತಕ್ಕದ್ದು

ನಿವೇಶನ ಹಂಚಿಕೆಯ ಸಮಯದಲ್ಲಿ ಖುದ್ದಾಗಿ ಹಾಜರಾಗಿರಬೇಕು ಅಥವಾ ತಮ್ಮ ಪ್ರತಿನಿಧಿಯ ಹೆಸರುನ್ನು ಸಂಘಕ್ಕೆ ತಿಳಿಸಿ ನಿಮ್ಮ ಬದಲಾಗಿ ಆ ವ್ಯಕ್ತಿಯು ಆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಂಘದಿಂದ ಅನುಮತಿ ಪಡೆದಿರಬೇಕು

ತಪ್ಪಿದಲ್ಲಿ ಈ ಪ್ರಕ್ರಿಯೆಯಿಂದ ಉಂಟಾಗಬಹುದಾದ ಎಲ್ಲಾ ಕಷ್ಟ–ನಷ್ಟಗಳಿಗೆ ಸಂಘವು ಯಾವುದೇ ವಿಧದಲ್ಲಿ ಹೊಣೆಯಾಗುವುದಿಲ್ಲವೆಂದು ಹಾಗೂ ತಾವೇ ನೇರ ಹೊಣೆಯಾಗುತ್ತಿರೆಂದು ತಮಗೆ ಈ ಪತ್ರದ ಮೂಲಕ ತಿಳಿಯಪಡಿಸಲಾಗಿದೆ.

ವಂದನೆಗಳೊಂದಿಗೆ

Anjali A.N.

ಆಡಳಿತ ಮಂಡಳಿ ಅನುಮತಿ ಮೇರೆಗೆ

ಮುಖ್ಯ ಕಾರ್ಯನಿರ್ವಾಹಣಾಧಿಕಾರಿ
ಬಿ.ಎಸ್.ಎನ್.ಎಲ್.ನೌಕರರ ಹೌಸಿಂಗ್ ಸಹಕಾರ
ಸಂಘ(ನಿ), ಮೈಸೂರು
B.S.N.L. Employees Housing
Co-operative Society Ltd., Mysuru